**ಸಾಕ್ಷಿಗೆ ದಿನಾಂಕ *30 -01-2026* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ 13 ರಿಂದ 16 ನೇ ಪ್ರತಿವಾದಿಯರ ಪರ ಶ್ರೀಮತಿ ವಿ ಎನ್?ಹೆಚ್?ವಕೀಲರಿಂದ

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ಈ ದಾವೆಯನ್ನು ಶಾಂತಾ ಎನ್ನುವವರು ವಿರುಪಾಕ್ಷಿ, ಬಸವರಾಜ ಮತ್ತು ಇತರರ ಮೇಲೆ ಮಾಡಿರುತ್ತಾರೆ. ನನಗೆ ವಾದಿ ಮತ್ತು ಪ್ರತಿವಾದಿಯರ ಮನೆತನದ ಸಂಪೂರ್ಣ ಮಾಹಿತಿ ಇರುತ್ತದೆ. ದಾವಾ ಆಸ್ತಿಗಳು ಮೂಲ ಪುರುಷ ರುದ್ರಪ್ಪ ರವರ ಮನೆತನದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಈರಪ್ಪ ಮತ್ತು ಚನ್ನಪ್ಪ ರವರು ಸರಕಾರಿ ನೌಕರಿಯಲ್ಲಿದ್ದು, ಅವರು ತಮ್ಮ ದುಡಿಮೆಯಿಂದ ಆಸ್ತಿಗಳನ್ನು ಖರೀದಿ ಹಿಡಿದಿರುತ್ತಾರೆ. ಈರಪ್ಪ ಮತ್ತು ಚನ್ನಪ್ಪ ರವರು 6 ಎಕರೆ ಹೊಲವನ್ನು ಖರೀದಿ ಹಿಡಿದಿರುತ್ತಾರೆ ಮತ್ತು ಖುಲ್ಲಾ ಪ್ಲಾಟನ್ನು ಖರೀದಿ ಹಿಡಿದಿರುತ್ತಾರೆ. ನನಗೆ ಸರ್ವೆ ನಂಬರ ನೆನಪಿರುವುದಿಲ್ಲ. ಆಸ್ತಿಗಳನ್ನು ಯಾವಾಗ ಖರೀದಿ ಹಿಡಿದಿರುತ್ತಾರೆ ಎಂದು ನಿಖರವಾಗಿ ಗೊತ್ತಿರುವುದಿಲ್ಲ. ಗೋಕಾವಿ ರವರ ಮನೆತನಕ್ಕೆ 3 ಪ್ಲಾಟಗಳು, ಒಂದು ಮನೆ ಮತ್ತು 6 ಎಕರೆ ಜಮೀನು ಇರುತ್ತದೆ. ರುದ್ರಪ್ಪ ರವರ ಹೆಂಡತಿಯ ಹೆಸರು ಸಿದ್ದಮ್ಮ. ರುದ್ರಪ್ಪ ರವರಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣುಮಗಳು ಇರುತ್ತಾರೆ. ಅವರೆಂದರೆ, ಶಂಕ್ರವ್ವ, ಈರಪ್ಪ, ಚನ್ನಬಸಪ್ಪ ಮತ್ತು ಚನ್ನಪ್ಪ. ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನಾನು 1955 ರಲ್ಲಿ ಜನಿಸಿರುತ್ತೇನೆ. ಶಂಕ್ರವ್ವ ರವರ ಮದುವೆ ಯಾವಾಗ ಆಗಿರುತ್ತದೆ ಎಂದು ನೆನಪಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಶಂಕ್ರವ್ವ ರವರ ಮದುವೆಯು 1958 ರಲ್ಲಿ ಆಗಿರುತ್ತದೆ ಎಂದು ನಮೂದಿಸಿದ್ದು, ಈ ಮಾಹಿತಿಯನ್ನು ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ನಾನೇ ತಿಳಿದುಕೊಂಡಿರುತ್ತೇನೆ ಎಂದು ಹೇಳುತ್ತಾರೆ. ನಾನು ಶಂಕ್ರವ್ವ ರವರ ಮದುವೆಗೆ ಹೋಗಿರಲಿಲ್ಲ. ನಾನು ದೇವಾಂಗ ಸಮಾಜದ ಅಧ್ಯಕ್ಷ ಇರುತ್ತೇನೆ. ವಾದಿ ಮತ್ತು ಪ್ರತಿವಾದಿಯ ಮನೆತನದವರು ನನಗೆ ದೂರದಿಂದ ಬೀಗರಾಗಬೇಕು. ಈರಪ್ಪ ಮತ್ತು ಚನ್ನಪ್ಪ ರವರು ಅವರ ಸಮಾಜದಲ್ಲಿ ಹಿರಿತನ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ಈರಪ್ಪ ರವರು ಹಿರಿತನ ಮಾಡುತ್ತಿದ್ದರು ಎಂದು ಹೇಳುತ್ತಾರೆ. 6 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಂಕ್ರವ್ವ ರವರ ಮದುವೆಯು 1950 ರಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿದಾರರು ಅವರ ಮದುವೆಯು 1958 ರಲ್ಲಿ ಆಗಿರುತ್ತದೆ ಎಂದು ತಿಳಿದುಕೊಂಡು ಹೇಳುತ್ತಿದ್ದೇನೆ ಎಂದು ಹೇಳುತ್ತಾರೆ. ಶಂಕ್ರವ್ವ ರವರ

ಸಹೋದರರ ಮದುವೆ ಯಾವಾಗ ಆಗಿರುತ್ತದೆ ಎಂದು ನೆನಪಿರುವುದಿಲ್ಲ. ಚನ್ನಪ್ಪ ಮತ್ತು ರುದ್ರಪ್ಪ ರವರು ದಾವಾ ಆಸ್ತಿಗಳನ್ನು ಖರೀದಿ ಹಿಡಿದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುವ ಬಗ್ಗೆ ತಿಳಿದುಕೊಂಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಮನೆತನದಲ್ಲಿ ಈ ವರೆಗೂ ಪಾಲುವಾಟ್ನಿ ಆಗಿರುವುದಿಲ್ಲ ಎಂದರೆ ಸಾಕ್ಷಿದಾರರು 1995 ರಲ್ಲಿ ಆಗಿರುತ್ತದೆ ಎಂದು ಹೇಳುತ್ತಾರೆ. ಪಾಲುವಾಟ್ನಿಯು ಬಸವ್ವ, ಚನ್ನಪ್ಪ ಮತ್ತು ಈರಪ್ಪ ರವರ ಮಧ್ಯ ಆಗಿರುತ್ತದೆ. ಶಂಕ್ರವ್ವ ರವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪಾಲುವಾಟ್ನಿಯಲ್ಲಿ ನಾನು ಭಾಗವಹಿಸಿರಲಿಲ್ಲ. ಪಾಲುವಾಟ್ನಿಯಲ್ಲಿ ಶಂಕ್ರವ್ವ ರವರು ಭಾಗ ವಹಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. 1995 ರಲ್ಲಿ ಶಂಕ್ರವ್ವ ಜೀವಂತ ಇದ್ದಾಗ ಅವರನ್ನು ಬಿಟ್ಟು ಈರಪ್ಪ ಮತ್ತು ಚನ್ನಪ್ಪ ರವರು ಪಾಲುವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು 1995 ರಲ್ಲಿ ಪಾಲುವಾಟ್ನಿ ಆಗಿರುತ್ತದೆ ಎಂದು ಹೇಳುತ್ತಾರೆ. 1995 ರಲ್ಲಿ ಆದ ಪಾಲುವಾಟ್ನಿಯಲ್ಲಿ ಶಂಕ್ರವ್ವ ರವರಿಗೆ ಯಾವ ಆಸ್ತಿಗಳನ್ನು ಕೊಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ತುಳಸಿಗೇರಿಯಲ್ಲಿ ಇರುವ ಜಮೀನಿನ ಸರ್ವೆ ನಂಬರ ಏನು ಎಂದು ಕೇಳಿದಾಗ ಸಾಕ್ಷಿದಾರರು ಅದು ಒಟ್ಟು 4 ಎಕರೆ ಜಮೀನು ಇದ್ದು, ಅದನ್ನು ಈರಪ್ಪ ರವರು ಮಾರಾಟ ಮಾಡಿ ಚನ್ನಪ್ಪ ರವರ ಮಗನಿಗೆ ವಿಜಯಪೂರದಲ್ಲಿ ಮನೆ ಕಟ್ಟಿಸಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ತುಳಸಿಗೇರಿಯಲ್ಲಿ ಇರುವ ಜಮೀನನ್ನು ಎಷ್ಟು ಮೌಲ್ಯಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ನೆನಪಿರುವುದಿಲ್ಲ ಎಂದು ಹೇಳುತ್ತಾರೆ. ಯಾವಾಗ ಮಾರಾಟ ಮಾಡಿರುತ್ತಾರೆ ಎಂದು ನೆನಪಿರುವುದಿಲ್ಲ. ಈರಣ್ಣ ರವರಿಗೆ ಸಂಬಂದಪಟ್ಟ ಯಾವುದೇ ಮನೆ ವಿಜಯಪೂರದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮನೆಯು ವಿಜಯಪೂರದಲ್ಲಿ ಯಾವ ಓಣಿಯಲ್ಲಿ ಇರುತ್ತದೆ ಎಂದು ನೆನಪಿರುವುದಿಲ್ಲ. ಪ್ಲಾಟ ನಂ. 10, 11 ಮತ್ತು 11 ಎ ಇವುಗಳನ್ನು ಈರಪ್ಪ ರವರು ಖರೀದಿ ಹಿಡಿದಿದ್ದು, ಅವುಗಳನ್ನು ಅವರು ಮಾರಾಟ ಮಾಡಿರುತ್ತಾರೆ. ಸದರಿ ಪ್ಲಾಟುಗಳಿಗೆ ಸಂಬಂದಪಟ್ಟಂತೆ ದಾಖಲೆಗಳನ್ನು ನೋಡಿರುತ್ತೇನೆ. ಈ ಕುರಿತು ದಾಖಲೆಗಳನ್ನು ಹಾಜರು ಪಡಿಸಿರುವ ಬಗ್ಗೆ ತಿಳಿದುಕೊಂಡಿರುವುದಿಲ್ಲ. ನನಗೆ ಈ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, 6 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5 ರಿಂದ 8 ನೇ ಪ್ರತಿವಾದಿಯರ ಮೂಲ ಪುರುಷ ಚನ್ನಪ್ಪ ರವರು ಯಾವಾಗ

ತೀರಿಕೊಂಡಿರುತ್ತಾರೆ ಎಂದು ಮಾಹಿತಿ ಇರುವುದಿಲ್ಲ. ನನಗೆ ಅವರ ತೀರಿಕೊಂಡಿರುವ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರು ಸುಳ್ಳು ಮಾಹಿತಿಯನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

ಸರ್ವೇನಂ. 317/1 ಮತ್ತು 317/2 ಈ ಎರಡೂ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಇವುಗಳನ್ನು ಈರಪ್ಪ ಮತ್ತು ಚನ್ನಪ್ಪ ರವರು ಕೂಡಿ ಖರೀದಿ ಹಿಡಿದಿರುತ್ತಾರೆ. ನಾನು ಇವುಗಳ ಖರೀದಿ ವ್ಯವಹಾರದಲ್ಲಿಭಾಗ ವಹಿಸಿರಲಿಲ್ಲ. ನಾನು ಕ್ರಯ ಪತ್ರಗಳನ್ನು ನೋಡಿರುತ್ತೇನೆ. ಅವುಗಳನ್ನು ಹಾಜರು ಪಡಿಸಿರುವ ಬಗ್ಗೆ ಮಾಹಿತಿ ಇರುವುದಿಲ್ಲ.

ಸರ್ವೆ ನಂ.213/1 ಸಿ ಇದನ್ನು ರುದ್ರಪ್ಪ ರವರಿಗೆ ಸ್ವಾತಂತ್ರ್ಯ ಹೋರಾಟಗಾರ ಎಂದು ಕೊಟ್ಟಿದ್ದರು ಎಂದರೆ ಸರಿ. ರುದ್ರಪ್ಪ ತೀರಿಕೊಂಡ ನಂತರ ಶಂಕ್ರವ್ವ ಮತ್ತು ಚನ್ನಬಸಪ್ಪ ರವರನ್ನು ಬಿಟ್ಟು ಕೇವಲ ನೀಲವ್ವ, ಈರಪ್ಪ ಮತ್ತು ಬಸಪ್ಪ ಹೆಸರುಗಳು ಮಾತ್ರ ವಾರಸುದಾರರಾಗಿ ದಾಖಲೆಗಳಲ್ಲಿ ಬಂದಿರುತ್ತಾರೆ ಎಂದರೆ ಸರಿ. ರುದ್ರಪ್ಪ ರವರು ತೀರಿಕೊಂಡ ನಂತರ ಕೇವಲ ನೀಲವ್ವ, ಈರಪ್ಪ ಮತ್ತು ಚನ್ನಪ್ಪ ಇವರು ಮಾತ್ರ ವಾರಸುದಾರರಾಗಿ ಬಂದು ಖೊಟ್ಟಿ ಡ ವನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನೀಲವ್ವ ಮತ್ತು ಚನ್ನಪ್ಪ ರವರು ಸೇರಿ ತುಳಸಿಗೇರಿ ಗ್ರಾಮದಲ್ಲಿ ಇರುವ ಜಮೀನನ್ನು ಈರಪ್ಪ ರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಈರಪ್ಪ ರವರಿಗೆ ತುಳಸಿಗೇರಿ ಗ್ರಾಮದ ಜಮೀನನ್ನು ಮಾರಾಟ ಮಾಡಲು ಸಂಪೂರ್ಣ ಮಾಲೀಕತ್ವದ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿದಾರರು ದಾಖಲೆಯಲ್ಲಿ ಅವರ ಹೆಸರು ಇರುವುದರಿಂದ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ.

ಅಮೀನಗಡದಲ್ಲಿ ಇರುವ ಮನೆ ನಂ. 379 ನ್ನು ರುದ್ರಪ್ಪ ರವರು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಮಾಡಿರಬಹುದು ಎಂದು ಹೇಳುತ್ತಾರೆ. ಶಂಕ್ರವ್ವ ರವರನ್ನು ಹೊರತುಪಡಿಸಿ ರುದ್ರಪ್ಪ ರವರ ಇತರೇ ಮಕ್ಕಳು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಪಾಲುವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಶಂಕ್ರವ್ವ ರವರ ಮದುವೆಯ ಸಮಯದಲ್ಲಿ ಎಷ್ಟು ವರದಕ್ಷಿಣೆ ಕೊಟ್ಟಿರುತ್ತಾರೆ ಎಂದು ಹೇಳಿ ಬರೆಸಿರುವುದಿಲ್ಲ. ಸಾಮಾನ್ಯವಾಗಿ ನಮ್ಮ ದೇವಾಂಗ ಸಮಾಜದಲ್ಲಿ ವರದಕ್ಷಿಣೆ ಕೊಡುವುದು ತೆಗೆದುಕೊಳ್ಳುವುದು ಇಲ್ಲ ಎಂದರೆ ಸಾಕ್ಷಿದಾರರು ಅನುಕೂಲ ಇದ್ದವರು ಕೊಡುತ್ತಾರೆ ಎಂದು ಹೇಳುತ್ತಾರೆ. ಪ್ಲಾಟ ನಂ.11 ಮತ್ತು 11 ಎ ಇವುಗಳನ್ನು ಈರಪ್ಪ ರವರ ಹೆಂಡತಿ ಗಂಗವ್ವ

ರವರಿಗೆ ಮಾರಾಟ ಮಾಡಲು ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿದಾರರು ಅವರಿಗೆ ಹಕ್ಕು ಇರುವುದರಿಂದ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸರ್ವೆ ನಂ. 317/1 ಮತ್ತು 317/2 ಇವುಗಳು ಬಿನ ಶೇತ್ಕಿಆಗಿದ್ದು, ಅದನ್ನು ವಿರುಪಾಕ್ಷಿ ಮತ್ತು ಬಸವರಾಜ ರವರು ಮಾಡಿರುತ್ತಾರೆ. ಬಿನ್ ಶೇತ್ಕಿ ವ್ಯವಹಾರದಲ್ಲಿ ನಾನು ಭಾಗ ವಹಿಸಿರುವುದಿಲ್ಲ. ಬಿನ್ ಶೇತ್ಕಿ ಮಾಡಲು ಖರ್ಚನ್ನು ವಿರುಪಾಕ್ಷಿ ಮತ್ತು ಬಸವರಾಜ ರವರು ಮಾಡಿದ್ದು, ಎಷ್ಟು ಖರ್ಚು ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಅಂದಾಜು 90 ರಿಂದ 95 ಲಕ್ಷ ಖರ್ಚು ಮಾಡಿರಬಹುದು ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ಈ ಕುರಿತು ದಾಖಲೆಗಳು ಇರುವ ಬಗ್ಗೆ ತಿಳಿದುಕೊಂಡಿರುವುದಿಲ್ಲ. ನನಗೆಈ ಕುರಿತು ಯಾವುದೇ ಮಾಹಿತಿ ಇರದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ್ಯು ಪತ್ರವನ್ನು ಯಾವಾಗ ಮಾಡಿರುತ್ತಾರೆ ಎಂದು ನೆನಪಿರುವುದಿಲ್ಲ. ಮೃತ್ಯು ಪತ್ರವನ್ನು ಮಾಡಲು ಈರಪ್ಪ ಮತ್ತು ಅವರ ಹೆಂಡತಿಗೆ ಯಾವುದೇ ಮಾಲಿಕತ್ವದ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಮೃತ್ಯು ಪತ್ರವು ಜಂಟೀ ಮೃತ್ಯು ಪತ್ರ ಆಗಿದ್ದು, ಅವರಲ್ಲಿ ಈರಪ್ಪ ತೀರಿಕೊಂಡಿದ್ದು, ಅವರ ಹೆಂಡತಿ ಜೀವಂತ ಇರುವುದರಿಂದ ಮೃತ್ಯು ಪತ್ರವು ನಡೆಯುವುದಿಲ್ಲ ಎಂದರೆ ಸರಿಯಲ್ಲ. ನನಗೆ ಸಂಬಂಪಟ್ಟ ಪ್ರಕರಣಗಳಿಗೆ ಸಾಕ್ಷ್ಯ ಕೊಡಲು ಬರುತ್ತೇನೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದರಿಂದ ಶಂಕ್ರವ್ವ ರವರಿಗೂ ಕೂಡ ದಾವಾ ಆಸ್ತಿಗಳಲ್ಲಿ ಸಮಾನ ಹಕ್ಕು ಬರುತ್ತದೆ ಎಂದರೆ ಸರಿಯಲ್ಲ. ಶಂಕ್ರವ್ವ ರವರಿಗೂ ಕೂಡ ಸರಿ ಸಮ ಹಕ್ಕು ಇದ್ದು, 6 ನೇ ಪ್ರತಿವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 9 ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.**

**ಪಾಟೀ ಸವಾಲು 10 ರಿಂದ 12 ನೇ ಪ್ರತಿವಾದಿಯರು ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಯಿತು. ಅವರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.